ಸಂ. ಎಲ್‌ಆರ್‌ಎಫ್ 400:88-89.

ವಿಭಾಗಾಧಿಕಾರಿಯವರ ಕಚೇರಿ,
ಮೈಸೂರು ವಿಭಾಗ,
ಮೈಸೂರು, ದಿನಾಂಕ 16-12-1988.

## ಸುತ್ತೋಲೆ

ಭೂ ಸುಧಾರಣೆ ಕಾಯಿದೆಯ ನಿಯಮ 17(9)ರ ಪ್ರಕಾರ ಭೂ ನ್ಯಾಯ ಮಂಡಳಿಯು ತೀರ್ಪನ್ನು ಬರೆಯುವಾಗ ಅದರಲ್ಲಿ ನಿರ್ಣಯಿಸಬೇಕಾದ ಅಂಶಗಳನ್ನು ಉಲ್ಲೇಖಿಸಿ ಈ ಅಂಶಗಳ ಮೇಲೆ ತನ್ನ ಅಭಿಪ್ರಾಯವನ್ನು ಸೂಚಿಸಿ ಮತ್ತು ಈ ರೀತಿ ಅಭಿಪ್ರಾಯಕ್ಕೆ ಬರಲು ಇರುವ ಸಕಾರಣಗಳನ್ನು ವಿವರವಾಗಿ ನಮೂದಿಸಿ ಸ್ಪೀಕಿಂಗ್ ಆರ್ಡರ್ ನೀಡುವ ಅವಶ್ಯಕತೆಯನ್ನು ನಿರೂಪಿಸಿದ್ದರೂ, ಮೈಸೂರು ಜಿಲ್ಲೆ, ಕೃಷ್ಣರಾಜನಗರ ತಾಲ್ಲೂಕು ಭೂ ಮಂಡಳಿಯಲ್ಲಿ ಒಂದು ಪ್ರಕರಣದಲ್ಲಿ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಆರ್ಡರ್ ಶೀಟಿನಲ್ಲಿ ತೀರ್ಪನ್ನು ಬಹಿರಂಗವಾಗಿ ಮತ್ತು ಪ್ರತ್ಯೇಕವಾಗಿ ಘೋಷಿಸಿದೆ ಎಂದು ಕಾಣಿಸಿದ್ದರೂ ಸಹ ತೀರ್ಪನ್ನು ನೀಡದಿರುವ ವಿಷಯ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ವಿಚಾರಣಾ ಸಮಯದಲ್ಲಿ ಬೆಳಕಿಗೆ ಬಂದಿರುವುದು ವರದಿಯಾಗಿದೆ.

ಇಂತಹ ತೀರ್ಪುಗಳಿಂದ ನ್ಯಾಯ ದೊರೆತಂತಾಗದೆ ಗೇಣಿದಾರರುಗಳಿಗೆ ಹಾಗೂ ಭೂ ಮಾಲೀಕರಿಗೆ ಅನಾವಶ್ಯಕ ತೊಂದರೆಯಾಗುವ ಸಾಧ್ಯತೆಯೇ ಹೆಚ್ಚು.

ಪ್ರತಿ ಭೂ ನ್ಯಾಯ ಮಂಡಳಿಗಳ ಅಧ್ಯಕ್ಷರುಗಳು ಮೇಲ್ಕಂಡ ಅಂಶಗಳನ್ನು ಅರಿತು ಇನ್ನು ಮುಂದೆ ಇಂತಹ ನ್ಯೂನತೆಗಳಿಗೆ ಅವಕಾಶ ನೀಡದೆ ಭೂ ಸುಧಾರಣೆ ಕಾಯಿದೆಯಲ್ಲಿ ನಿರೂಪಿಸಿರುವ ಅಂಶಗಳನ್ವಯ ಸ್ಪಷ್ಟ ಅಭಿಪ್ರಾಯಗಳೊಂದಿಗೆ ಸ್ಪೀಕಿಂಗ್ ಆರ್ಡರ್ ನೀಡಲು ಸೂಚಿಸಿದೆ. ಇಂತಹ ಪ್ರಕರಣಗಳು ಇನ್ನು ಮುಂದೆ ಮರುಕಳಿಸಿದಲ್ಲಿ ಕರ್ತವ್ಯಲೋಪವಾದ ಅಧ್ಯಕ್ಷರುಗಳ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

ವಿಭಾಗಾಧಿಕಾರಿಯವರ ಪರವಾಗಿ.

ಪ್ರತಿಯನ್ನು ಈ ಕೆಳಕಂಡವರಿ ತಿಳುವಳಿಕೆ ಹಾಗೂ ಕಟ್ಟುನಿಟ್ಟಾದ ಕ್ರಮಕ್ಕಾಗಿ ರವಾನಿಸಿದೆ:

1. ವಿಭಾಗದ ಎಲ್ಲಾ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು.
2. ವಿಭಾಗದ ಎಲ್ಲಾ ತಹಸೀಲ್ದಾರ್:ವಿಶೇಷ ತಹಸೀಲ್ದಾರ್.
3. ವಿಭಾಗದ ಎಲ್ಲಾ ಉಪ ವಿಭಾಗಾಧಿಕಾರಿಗಳು.
4. ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳ ಕಟ್ಟುನಿಟ್ಟಾದ ಉಸ್ತುವಾರಿಗಾಗಿ.

—